# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 90 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರವಿಕುಮಾರ್ ಎನ್.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13-02-2023 |
| ಉತ್ತರಿಸುವ ಸಚಿವರು | : | ಪ್ರವಾಸೋದ್ಯಮ, ಜೀವಿಶಾಸ್ತ್ರ,<br>ಹಾಗೂ ಪರಿಸರ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಎಷ್ಟು ರೆಸಾರ್ಟ್‌ಗಳು ಇವೆ; (ಹೆಸರಿನೊಂದಿಗೆ ಮಾಹಿತಿ ನೀಡುವುದು)</td><td>ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಭಾಗದಲ್ಲಿ (ದಾಂಡೇಲಿ ಮತ್ತು ಜೋಯಿಡಾ ತಾಲ್ಲೂಕು) ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಅನುಮೋದನ ನೀಡಿರುವ ರೆಸಾರ್ಟ್‌ಗಳು ಮತ್ತು ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯಿಂದ ನಿರ್ವಹಣೆ ಮಾಡುತ್ತಿರುವ ರೆಸಾರ್ಟ್‌ಗಳ ವಿವರ ಕೆಳಕಂಡಂತಿದೆ.<br><br>1. ಸ್ಟ್ಯಾರ್‌ಲಿಂಗ್ ರೆಸಾರ್ಟ್ಸ್, ಹಾರ್ನೋಡ, ತಾ:ದಾಂಡೇಲಿ.<br>2. ಶ್ರೀಯೋಗ್ ಇನ್ ರೆಸಾರ್ಟ್ಸ್, ಅಂಬೇವಾಡಿ, ತಾ: ದಾಂಡೇಲಿ<br>3. ಡ್ರೀಮ್ ಫ್ಲಾವರ್ ರೆಸಾರ್ಟ್ಸ್, ಬರ್ಚಿ, ತಾ:ದಾಂಡೇಲಿ.<br>4. ಹಾರ್ನ್‌ಬಿಲ್ ರೆಸಾರ್ಟ್ಸ್, ಗಣೇಶಗುಡಿ, ತಾ:ಜೋಯಿಡಾ.<br>5. ವಿಶಲಿಂಗ್ ವುಡ್ಸ್ ರೆಸಾರ್ಟ್ಸ್, ಬಾಡಗುಂದ, ತಾ:ಜೋಯಿಡಾ<br>6. ಅಂಶಿ ರೆಸಾರ್ಟ್ಸ್, ಮೌಳಂಗಿ, ತಾ: ಜೋಯಿಡಾ<br>7. ಕಾಳಿ ಸಾಹಸ ಶಿಬಿರ, ದಾಂಡೇಲಿ<br>8. ಓಲ್ಡ್ ಮ್ಯಾಗಝಿನ್ ಹೌಸ್, ಗಣೇಶಗುಡಿ.</td></tr>
<tr><td>ಆ)</td><td>ಈ ರೆಸಾರ್ಟ್‌ಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು; ಅನಧಿಕೃತ ರೆಸಾರ್ಟ್‌ಗಳ ಸಂಖ್ಯೆ ಎಷ್ಟು, ಈ ಅನಧಿಕೃತ ರೆಸಾರ್ಟ್‌ಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)</td><td>ಇಲಾಖೆಯಿಂದ ಅನುಮೋದಿತಗೂಂಡ ರೆಸಾರ್ಟ್ಸ್‌ಗಳಿಂದ ಪ್ರವಾಸೋದ್ಯಮ ಇಲಾಖೆಗೆ ಯಾವುದೇ ಆದಾಯ ಬರುವುದಿಲ್ಲ.<br><br>ಅನಧಿಕೃತ ರೆಸಾರ್ಟ್ಸ್‌ಗಳ ಬಗ್ಗೆ ಮಾಹಿತಿ ಮತ್ತು ಕ್ರಮ ಕೈಗೊಳ್ಳುವ ವಿಷಯವು ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.<br><br>ಜೆ.ಎಲ್.ಆರ್. ಸಂಸ್ಥೆ ನಿರ್ವಹಣೆ ಮಾಡುತ್ತಿರುವ ರೆಸಾರ್ಟ್ಸ್‌ಗಳಿಂದ ಸದರಿ ಸಂಸ್ಥೆಗೆ ಬರುತ್ತಿರುವ ಆದಾಯದ ವಿವರಗಳು ಕೆಳಕಂಡಂತಿವೆ:-<br><br>
<table>
<tr><th>ಕ್ರ ಸಂ</th><th>ರೆಸಾರ್ಟ್ ಹೆಸರು</th><th>ವರ್ಷ</th><th>ಆದಾಯ/ನಷ್ಟ (ರೂ. ಲಕ್ಷಗಳಲ್ಲಿ)</th></tr>
<tr><td rowspan="3">1.</td><td rowspan="3">ಕಾಳಿ ಸಾಹಸ ಶಿಬಿರ, ದಾಂಡೇಲಿ</td><td>2020-21</td><td>ನಷ್ಟ 47.88</td></tr>
<tr><td>2021-22</td><td>ನಷ್ಟ 21.29</td></tr>
<tr><td>2022-23 (ಜನವರಿ-2023 ರವರೆಗೆ)</td><td>ಲಾಭ 52.66</td></tr>
<tr><td rowspan="3">2.</td><td rowspan="3">ಓಲ್ಡ್ ಮ್ಯಾಗಝಿನ್ ಹೌಸ್, ಗಣೇಶಗುಡಿ.</td><td>2020-21</td><td>ಲಾಭ 14.84</td></tr>
<tr><td>2021-22</td><td>ಲಾಭ 20.67</td></tr>
<tr><td>2022-23 (ಜನವರಿ-2023 ರವರೆಗೆ)</td><td>ಲಾಭ 32.67</td></tr>
</table></td></tr>
</table>

| | | |
|---|---|---|
| ಇ) | ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ರಿವರ್ ರಾಫ್ಟಿಂಗ್, ಕಯಾಕಿಂಗ್ ನಂತಹ ಜಲ ಸಾಹಸ ಕ್ರೀಡೆಗಳನ್ನು ನಡೆಸಲು ಎಷ್ಟು ಸಂಸ್ಥೆಗಳಿಗೆ ಅನುಮತಿ ನೀಡಲಾಗಿದೆ; (ಹೆಸರಿನೊಂದಿಗೆ ವಿವರ ನೀಡುವುದು) | ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಭಾಗದ ಜೋಯಿಡಾ ತಾಲ್ಲೂಕಿನ ಅವೇಡಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಳಿ ನದಿಯಲ್ಲಿ ರಿವರ್ ರಾಫ್ಟಿಂಗ್, ಕಯಾಕಿಂಗ್, ಮತ್ತು ಜಲ ಸಾಹಸ ಕ್ರೀಡೆ ನಡೆಸಲು 7 ಸಂಸ್ಥೆಗಳಿಗೆ ಜಿಲ್ಲಾಧಿಕಾರಿಗಳ ಹಂತದಲ್ಲಿ ಅನುಮತಿ ನೀಡಿರುತ್ತಾರೆ. ವಿವರ ಈ ಕೆಳಗಿನಂತಿದೆ.<br>1. ಶ್ರೀ ದಿನೇಶ ಸಾನು, ಅಕ್ವಾಪುಡ್ಸ್, ಇಳವಾ, ಗಣೇಶಗುಡಿ, ತಾ\|\|ಜೋಯಿಡಾ.<br>2. ಶ್ರೀ ಪ್ರಕಾಶ ಶಿವರಾಮ ಮಾನೆ, ಹಿಲ್ಪರ್‌ಬಿಲ್ ರೆಸಾರ್ಟ್, ಇಳವಾ, ಗಣೇಶಗುಡಿ, ತಾ\|\|ಜೋಯಿಡಾ.<br>3. ಶ್ರೀ ಅಬ್ದುಲ್ ಅಲೀಮ ಮೊಹಮ್ಮದ್ ರಫೀಕ್, ಬಸರಿಕಟ್ಟೆ, ಮ\|\|ಲಗೂನಾ ಪಾಟಂ ಸ್ಪೋರ್ಟ್ಸ್, ಇಳವಾ ಗ್ರಾಮ, ತಾ\|\|ಜೋಯಿಡಾ.<br>4. ಶ್ರೀ ಶ್ರೀಪತಿ ಕೃಷ್ಣ ಭಟ್, ಹಾರ್ನಬಿಲ್ ರಿವರ್ ರೆಸಾರ್ಟ್ಸ್, ಯುನಿಟ್ ಆಫ್ ಮಾನಸಾ ಅಡ್ವೆಂಚರ್ಸ್, ಇಳವಾ, ಗಣೇಶಗುಡಿ ತಾ\|\|ಜೋಯಿಡಾ.<br>5. ಶ್ರೀಮತಿ ಸ್ಮಿತಾ ವಿನಾಯಕ ಜಾಧವ, ವಿಶಲಿಂಗ್ ವುಡ್ ರೆಸಾರ್ಟ್ಸ್, ಬಾಡಗುಂದ ಗ್ರಾಮ, ತಾ\|\|ಜೋಯಿಡಾ.<br>6. ಬೈಸನ್ ರಿವರ್ ರೆಸಾರ್ಟ್ಸ್ ಇಳವಾ ಗ್ರಾಮ, ತಾ\|\|ಜೋಯಿಡಾ.<br>7. ಮಾನಸಾ ಅಡ್ವೆಂಚರ್ಸ್, ಇಳವಾ, ಗಣೇಶಗುಡಿ, ತಾ\|\|ಜೋಯಿಡಾ.<br>ಹಾಗೂ<br>ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಕಾಳಿ ನದಿಯಲ್ಲಿ ರಿವರ್ ರಾಫ್ಟಿಂಗ್ ನಡೆಸಲು ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ಟೆಂಡರ್ ಪ್ರಕ್ರಿಯೆ ಅನುಸರಿಸಿ, M/s. AllGo Trip Hospitality Pvt. Ltd., Uttarakhand, ಸಂಸ್ಥೆಗೆ ಅನುಮತಿ ನೀಡಿರುತ್ತಾರೆ. |
| ಈ) | ರಿವರ್ ರಾಫ್ಟಿಂಗ್ ಕಯಾಕಿಂಗ್ ನಂತಹ ಜಲಸಾಹಸ ಕ್ರೀಡೆಗಳನ್ನು ನಡೆಸಲು ಕೈಗೊಳ್ಳಲಾಗುವ ಮುಂಜಾಗ್ರತಾ ಕ್ರಮಗಳಾವುವು; ಅನಧಿಕೃತವಾಗಿ ಇಂತಹ ಸಾಹಸ ಕ್ರೀಡೆಗಳನ್ನು ನಡೆಸುವ ಸಂಸ್ಥೆಗಳಿಂದ ಪ್ರವಾಸಿಗರ ಪ್ರಾಣ ಹಾನಿಯಂತಹ ಗಂಭೀರ ದುರಂತಗಳು ಜರುಗಿದರೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ? (ವಿವರ ನೀಡುವುದು) | ಈ ಹಿಂದೆ ಅಸುರಕ್ಷಿತವಾಗಿ ನಡೆಯುತ್ತಿದ್ದ ಜಲ ಸಾಹಸ ಕ್ರೀಡೆಗಳನ್ನು ಒಂದು ವ್ಯವಸ್ಥಿತ ಮಾದರಿಯಲ್ಲಿ ಮತ್ತು ನಿರ್ವಹಣೆಯೊಂದಿಗೆ ನಡೆಸುವ ಉದ್ದೇಶದಿಂದ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಿವರ್ ರಾಫ್ಟಿಂಗ್ ಮತ್ತು ಜಲಸಾಹಸ ಕ್ರೀಡೆ ನಿರ್ವಹಣೆ ಹಾಗೂ ಮೇಲುಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿ ರಚನೆಯಾದ ನಂತರ ಅನಧಿಕೃತ ಹಾಗೂ ಅಸುರಕ್ಷಿತ ರಾಫ್ಟಿಂಗ್ ಮತ್ತು ಜಲ ಕ್ರೀಡೆಗಳಿಗೆ ತಡೆ ಹಾಕಲಾಗಿದೆ. ಈ ಸಮಿತಿವತಿಯಿಂದ GETHNAA, NIWS ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಅನುಮೋದಿಸಲ್ಪಟ್ಟ ಸಂಸ್ಥೆಗಳಿಂದ ನೋಂದಣಿ ಮತ್ತು ತರಬೇತಿ ಪ್ರಮಾಣ ಪತ್ರ ಪಡೆದ ಮತ್ತು ಅವುಗಳ ಸುರಕ್ಷತೆಗೆ ಸಂಬಂಧಿಸಿದಂತೆ ನಿಗದಿಪಡಿಸಿ ಹೊರಡಿಸಿರುವ ಮಾರ್ಗಸೂಚಿಗಳು, ಮಾನದಂಡಗಳನ್ನು ಪಾಲನೆ ಮಾಡುವ ಸಂಸ್ಥೆಗಳಿಗೆ ಮಾತ್ರ ರಿವರ್ ರಾಫ್ಟಿಂಗ್ ಮತ್ತು ಜಲಸಾಹಸ ಕ್ರೀಡೆಗೆ ಅನುಮತಿ ನೀಡಲಾಗಿರುತ್ತದೆ. ಅನುಮತಿ ಪಡೆದವರು ಅನುಮತಿ ನಿಯಮಗಳನುಸಾರ ಚಟುವಟಿಕೆ ನಡೆಸುತ್ತಿರುವ ಕುರಿತು ಪರಿಶೀಲನೆ ಮಾಡಲು ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳನ್ನೊಳಗೊಂಡ ನಿಯಂತ್ರಣ ಉಪ ಸಮಿತಿಯನ್ನು ಸಹ ರಚಿಸಲಾಗಿರುತ್ತದೆ. ನಿಬಂಧನೆಗಳ ಷರತ್ತುಗಳನ್ವಯ ಅವಘಡ/ಪ್ರಾಣಹಾನಿ ಸಂಭವಿಸಿದ್ದಲ್ಲಿ ಅನುಮತಿ ಪಡೆದ ರಿವರ್ ರಾಫ್ಟಿಂಗ್ ಮತ್ತು ಜಲಸಾಹಸ ಕ್ರೀಡೆ ಆಪರೇಟರ್‌ಗಳೇ ನೇರ ಹೊಣೆಗಾರರಾಗಿರುತ್ತಾರೆ ಮತ್ತು ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬಹುದಾಗಿರುತ್ತದೆ. |

ರಿವರ್ ರಾಫ್ಟಿಂಗ್ ನಡೆಸಲು ಆಯ್ಕೆಯಾದ ಸಂಸ್ಥೆ ಹಾಗು ಜೆ.ಎಲ್.ಆರ್ ನಡುವೆ ಮಾಡಿಕೊಂಡಿರುವ ಕರಾರಿನ ಪ್ರಕಾರ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ರಿವರ್ ರಾಫ್ಟಿಂಗ್ ನಡೆಸುವ ಸಂಸ್ಥೆ ಕೈಗೊಳ್ಳಬೇಕಾಗಿರುತ್ತದೆ.

1. ಸಾಹಸ ಚಟುವಟಿಕೆಗಳ ಕ್ಷೇತ್ರದಲ್ಲಿ ಅಗತ್ಯವಾದ ಪರಿಣಿತಿ ಹಾಗು ಅರಣ್ಯ ಪರಿಸರದ ಬಗ್ಗೆ ಆಳವಾದ ಜ್ಞಾನ ಹೊಂದಿರುವ, ಅರ್ಹ ಮಾನವ ಸಂಪನ್ಮೂಲವನ್ನು ಒದಗಿಸುವುದು.

2. ಅಗತ್ಯವಿರುವ ಎಲ್ಲಾ ರಾಫ್ಟಿಂಗ್ ಉಪಕರಣಗಳು ಉತ್ತಮ ಸ್ಥಿತಿಯಲ್ಲಿರಬೇಕು ಹಾಗು ಬಳಸುವ ಉಪಕರಣಗಳ ಎಲ್ಲಾ ಸುರಕ್ಷತಾ ಮಾನದಂಡಗಳು ಮತ್ತು ಒಳಗೊಂಡಿರುವ ಚಟುವಟಿಕೆಗಳ ಬಗ್ಗೆ ಸಂಪೂರ್ಣವಾಗಿ ತಿಳಿದಿರುವ ಅನುಭವಸ್ಥ ಬೋಧಕರುಗಳನ್ನು ಮತ್ತು ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಬೇಕು.

3. ರಾಫ್ಟಿಂಗ್ ಸಮಯದಲ್ಲಿ ಯಾವುದೇ ಅಪಘಾತಗಳನ್ನು ತಪ್ಪಿಸಲು ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿರಬೇಕು. ಒಂದು ವೇಳೆ ಯಾವುದೇ ಅಪಘಾತಗಳು, ಅನಾರೋಗ್ಯ, ಸಾವು, ಗಾಯ, ಅಂಗವೈಕಲ್ಯ ಇತ್ಯಾದಿ ಘಟನೆಗಳು ನದಿಯಲ್ಲಿ ರಾಫ್ಟಿಂಗ್ ಚಟುವಟಿಕೆಯ ಸಂದರ್ಭದಲ್ಲಿ ಅಥವಾ ನಂತರದ ಸಮಯದಲ್ಲಿ ಜರುಗಿದರೆ ಅದಕ್ಕೆ ಸಂಬಂಧಿಸಿದ ಯಾವುದೇ ಕ್ಲೈಮ್‌ಗಳನ್ನು ರಾಫ್ಟಿಂಗ್ ನಡೆಸುವ ಸಂಸ್ಥೆ ಭರಿಸಬೇಕು.

4. ಅಪಘಾತ ಅಥವಾ ಇತರ ವೈದ್ಯಕೀಯ ತುರ್ತು ಸಂದರ್ಭದಲ್ಲಿ ಸ್ಥಳದಲ್ಲಿ ಸಾಕಷ್ಟು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು.

5. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವಾಟರ್‌ಸ್ಪೋರ್ಟ್ಸ್ (NIWS)ನಿಂದ ಅನುಮೋದಿಸಲ್ಪಟ್ಟ ರಾಫ್ಟ್‌ಗಳ ಬಗ್ಗೆ ನೀಡಲಾದ ಪ್ರಮಾಣಪತ್ರ/ ಪರವಾನಗಿಯನ್ನು ಹೊಂದಿರಬೇಕು ಮತ್ತು ರಾಫ್ಟ್‌ಗಳು ಉತ್ತಮ ಸ್ಥಿತಿಯಲ್ಲಿವೆಯೇ ಎಂದು ಖಚಿತಪಡಿಸಿಕೊಳ್ಳಬೇಕು

6. ವಾಟರ್ ರಾಫ್ಟಿಂಗ್ ಚಟುವಟಿಕೆಗಳನ್ನು ನಡೆಸಲು ನಿಯೋಜಿಸಲಾದ ಎಲ್ಲಾ ಮಾರ್ಗದರ್ಶಿಗಳು ಕಡ್ಡಾಯವಾಗಿ ಜೀವ ಉಳಿಸುವ ತಂತ್ರಗಳು/ ನೀರಿನ ಸುರಕ್ಷತೆ/ ಪ್ರಥಮ ಚಿಕಿತ್ಸೆ ಮತ್ತು ರಕ್ಷಣಾ ತಂತ್ರಗಳಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವಾಟರ್‌ಸ್ಪೋರ್ಟ್ಸ್ (NIWS)/ ರಕ್ಷಣಾ ಇಂಟರ್‌ನ್ಯಾಷನಲ್/ ಎಸ್‌ಆರ್‌ಟಿ (ಸಮರ್ಥ ಪ್ರಾಧಿಕಾರ) ಮಾನ್ಯ ಮಾಡಿರುವ ಪ್ರಮಾಣ ಪತ್ರವನ್ನು ಹೊಂದಿರಬೇಕು.

7. ರಾಫ್ಟ್‌ಗಳ ಬಗ್ಗೆ ಲಿಖಿತವಾಗಿ ಪ್ರಮಾಣೀಕರಿಸಿ, ಸೂಕ್ತವಾಗಿದೆ ಮತ್ತು ಪ್ರಮಾಣೀಕೃತ ಮೇಲ್ವಿಚಾರಕರ ಮೂಲಕ ನೀರು ಯೋಗ್ಯವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

8. ಮಾರ್ಗದರ್ಶಿಗಳು ಮತ್ತು ಗ್ರಾಹಕರು ಕರ್ನಾಟಕ ಅರಣ್ಯ ಕಾಯಿದೆ, 1963, ಅರಣ್ಯ ನಿಯಮಗಳು 1969, ಅರಣ್ಯ ಸಂರಕ್ಷಣಾ ಕಾಯಿದೆ, 1980 ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ, 1972ರ ಯಾವುದೇ ಷರತ್ತುಗಳನ್ನು ಉಲ್ಲಂಘಿಸಬಾರದು. ಯಾವುದೇ ಉಲ್ಲಂಘನೆ ಯಾದಲ್ಲಿ, ಗ್ರಾಹಕರ ಜೊತೆಗೆ ರಾಫ್ಟಿಂಗ್ ನಡೆಸುವ ಸಂಸ್ಥೆಯೂ ಸಹ ಜವಾಬ್ದಾರಿಯಾಗುತ್ತದೆ

TOR 11 TDV 2023

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ
ಹಾಗೂ ಪರಿಸರ ಸಚಿವರು